

# ಕ್ರೇಜಿ ಕೀಟಜಗತ್ತು

‘ಇಲ್ಲಿ ಯಾರೂ ಮುಖ್ಯರಲ್ಲ, ಯಾರು ಅಮುಖ್ಯರಲ್ಲ’ ಎನ್ನುವ ಕವಿದರ್ಶನಕ್ಕೆ ಉದಾಹರಣೆಯಂತೆ ಸಿಂಗಾಪುರದಲ್ಲಿ ಕೀಟೋದ್ಯಮವೊಂದು ರೂಪುಗೊಂಡಿದೆ. ವಿಶ್ವದಲ್ಲಿ ಹಸಿವಿನ ಸಮಸ್ಯೆಯ ತಾಂಡವದ ಜೊತೆಗೆ, ಲಕ್ಷಾಂತರ ಟನ್ ಆಹಾರ ವ್ಯರ್ಥವಾಗುವ ವಿರೋಧಾಭಾಸವೂ ಇದೆಯಷ್ಟೇ. ಹೀಗೆ ವ್ಯರ್ಥವಾಗುವ ಆಹಾರದೊಂದಿಗೆ ಕೀಟೋದ್ಯಮ ತಳಕು ಹಾಕಿಕೊಂಡಿದೆ.

■ ಶಶಿಕುಮಾರ್ ಸಿ.

ಭಾರತದ ಮನೆಯೊಂದರಲ್ಲಿ ವ್ಯಕ್ತಿಯೊಬ್ಬ ಒಂದು ವರ್ಷಕ್ಕೆ ಸರಾಸರಿ 50 ಕೆ.ಜಿ.ಯಷ್ಟು ಆಹಾರ ವ್ಯರ್ಥ ಮಾಡುತ್ತಿದ್ದಾನೆ. ಇದು 2021ರ ‘ಫುಡ್ ವೇಸ್ಟ್ ಇಂಡೆಕ್ಸ್’ ವರದಿಯ ಉಲ್ಲೇಖ. ಹಸಿವು ನೀಗಿಸಲು ಮುಂದಿರಬೇಕಾದ ನಾವು, ಆಹಾರ ವ್ಯರ್ಥ (ಫುಡ್ ವೇಸ್ಟ್) ಮಾಡುವುದರಲ್ಲಿ ಮುಂದಿದ್ದೇವೆ! ಭಾರತವಷ್ಟೇ ಅಲ್ಲ, ವಿಶ್ವದ ಬಹುತೇಕ ದೇಶಗಳು ಅನ್ನದ ಬೆಲೆ ತಿಳಿಯದಂತೆ ವರ್ತಿಸುತ್ತಿವೆ. ಜಗತ್ತಿನ ಜ್ವಲಂತ ಸಮಸ್ಯೆಗಳ ಪಟ್ಟಿಯಲ್ಲಿ ಆಹಾರ ವ್ಯರ್ಥ ಹಾಗೂ ಅದರ ವಿಲೇವಾರಿಯೂ ಸೇರಿದೆ.

‘ಫುಡ್‌ವೇಸ್ಟ್ ಇಡೀ ಜಗತ್ತಿಗೆ ಸಮಸ್ಯೆ. ಆದರೆ ನಮಗಲ್ಲ’ ಎಂದು ನಂಬಿರುವ ದೂರದ ಸಿಂಗಾಪುರದ ಜೋಡಿಯೊಂದು, ವ್ಯರ್ಥಗೊಂಡ ಆಹಾರವನ್ನು ವಿಲೇವಾರಿ ಮಾಡಲು ಪರಿಹಾರವೊಂದನ್ನು ಕಂಡುಕೊಂಡಿದ್ದಾರೆ. ಅದುವೇ ‘ಕ್ರೇಜಿ ಕೀಟ’ (ಕೀಟಗಳ ಫಾರ್ಮ್– ಇನ್‌ಸೆಕ್ಟ್ ಫಾರ್ಮ್) ಜಗತ್ತು. ಜುನ್ ವೇಯ್ **(Jun wei)** ಮತ್ತು ಕಾಯ್ ನಿಂಗ್ ಚುವಾ **(kai KaiNing Chua)** ಎಂಬುವವರೇ ಆ ಜೋಡಿ.

## ವ್ಯರ್ಥಗೊಳ್ಳುವ ಆಹಾರಕ್ಕೆ ಬಕಾಸುರ ಬಾಯಿ

ವ್ಯರ್ಥಗೊಂಡ ಸಾವಿರಾರು ಟನ್ ಆಹಾರವನ್ನು ತರಿಸಿಕೊಂಡು ಕೀಟಗಳಿಗೆ ಉಣಬಡಿಸಿ, ಅವುಗಳಿಂದ ಜೈವಿಕ ವಸ್ತುವನ್ನು ಹೊರತೆಗೆಯುತ್ತಿದೆ ಈ ಜೋಡಿ. ಕ್ರೇಜಿ ಕೀಟಜಗತ್ತೇ ಅವರಿಗೆ ಲಾಭದಾಯಕ ಉದ್ಯಮವಾಗಿ ಪರಿಣಮಿಸಿದ್ದು, ನವೋದ್ಯಮ ರೂಪದಲ್ಲಿ ಅವರು ಪ್ರಾರಂಭಿಸಿದ ‘ಫಾರ್ಮ್’ ಜಗತ್ತಿನ ಮೊದಲ ಕೀಟಗಳ ಫಾರ್ಮ್ ಸಹ ಆಗಿದೆ. ಕೀಟಗಳಿಂದ ಅಂತರ ಕಾಯ್ದುಕೊಳ್ಳುವವರ ನಡುವೆ ಈ ಜೋಡಿ ಭಿನ್ನವಾಗಿ ಕಾಣಿಸುತ್ತದೆ.

‘‘ಊಟ ಪೂರ್ತಿಯಾಗಿ ತಿನ್ನದೇ ಉಳಿಸುವುದರಿಂದ ಆಹಾರ ವ್ಯರ್ಥವಾಗುತ್ತದೆ’ ಎಂದು ಸಾಕಷ್ಟು ಮಂದಿ ನಂಬಿದ್ದಾರೆ. ಆ ರೀತಿ ಆಹಾರ ವ್ಯರ್ಥ ಆಗುತ್ತಿರುವುದು ಕೇವಲ ಶೇ.20 ಮಾತ್ರ. ಉಳಿದ ಶೇ. 80ರಷ್ಟು ಆಹಾರ ವ್ಯರ್ಥವಾಗುತ್ತಿರುವುದು ಫುಡ್ ಫ್ಯಾಕ್ಟರಿಗಳಿಂದ. ಲಕ್ಷಾಂತರ ಟನ್ ಆಹಾರವನ್ನು ಉತ್ಪಾದಿಸುವಾಗ ಸಾವಿರಾರು ಟನ್ ಆಹಾರ ವ್ಯರ್ಥವಾಗುವುದು ಸಹಜ’ ಎನ್ನುವ ಈ ಜೋಡಿ, ‘ಅದನ್ನು ಬಿಸಾಡಲೇಬೇಕಿರುವುದು ಅನಿವಾರ್ಯವೆಂದು ನಂಬಲಾಗಿದೆ. ಅದು ತಪ್ಪು’ ಎನ್ನುತ್ತದೆ.

ವ್ಯರ್ಥಗೊಳ್ಳುವ ಆಹಾರವನ್ನು ಎಲ್ಲೆಂದರಲ್ಲಿ ಬಿಸಾಡುವುದರಿಂದ ಅದು ಕೊಳೆತು ವಾತಾವರಣ


ಜುನ್ ವೇಯ್